ಶ್ರೀ ಕಾಗೋಡು ತಿಮ್ಮಪ್ಪ.—ಗಂಡಹೆಂಡಿರು ಇರುವ ಕಡೆ ಸ್ವಲ್ಪ ನೋಡಿ ಟ್ರಾನ್ಸ್‌ಫರ್ ಮಾಡಿ.

ಶ್ರೀ ಎ. ಆರ್. ಬದರೀನಾರಾಯಣ.—ಅದನ್ನು ನೋಡುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಈ ವಿಷಯ ಅಸೆಂಬ್ಲಿಯೊಳಗೆ ಸಾಕಷ್ಟು ಚರ್ಚೆಗೆ ಬಂದು ಸರಕಾರದವರು ತೀರ್ಮಾನ ಕೈಗೊಂಡಿದ್ದರೂ ಸಹ ಅನೇಕ ಡಿಸ್ಟ್ರಿಕ್ಟ್‌ಗಳಲ್ಲಿ ಇನ್ನೂ ಇದನ್ನು ಎಫೆಕ್ಟ್‌ಗೆ ಕೊಡಲಲ್ಲ. ಆ ರೀತಿ ಯಾರು ಟ್ರಾನ್ಸ್‌ಫರ್ ಮಾಡಲಲ್ಲ ಎಂದು ಏವರ ಇಟ್ಟುಕೊಂಡು ಅವರ ಬಗ್ಗೆ ಕ್ರಮ ಏನಾದರೂ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅದಕ್ಕೆ ಬಹಳ ರೆಜಿಸ್ಟೆನ್ಸ್ ಬರುತ್ತಾ ಇದೆ. ಅವರು ಇರುವ ಊರನ್ನು ಬಿಟ್ಟು ಟ್ರಾನ್ಸ್‌ಫರ್ ಮಾಡಬಾರದು, ಎಂದು ಅಸೋಸಿಯೇಷನ್ನಿನಿಂದ ಬಹಳ ಪ್ರೆಜರ್ಸ್ ಬರುತ್ತಾ ಇದೆ. ಅವಾಗ್ಯೂ ಕೂಡ ಸರಕಾರ ಮಾಡಿಯೇ ತೀರಬೇಕು ಎಂದು ನಿರ್ಧಾರ ತೆಗೆದುಕೊಂಡಿರುವುದರಿಂದ ಯಾರಾದರೂ ಅಧಿಕಾರಿಗಳು ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಇದು ಹಿಂದೆ ಇದ್ದದ್ದು ಅದನ್ನು ಈಗ ಬದಲಾವಣೆ ಮಾಡುತ್ತೇವೆ, ಎಂದು ಹೇಳಿದಿರಿ. ಈಗ ಅಧಿಕಾರ ವಹಿಸಿಕೊಂಡ ಮೇಲೆ ಈ ಒಂದು ತತ್ವವನ್ನು ಅನುಸರಿಸಿ ಎಷ್ಟು ಜನರನ್ನು ವರ್ಗ ಮಾಡಿದ್ದೀರಿ ?

ಶ್ರೀ ಎ. ಆರ್. ಬದರೀನಾರಾಯಣ.—ಕೆಲವರು ಸರ್ವಿಸ್‌ಗೆ ಸೇರಿದಾಗಿನಿಂದಲೂ ಇದ್ದಾರೆ, ಮತ್ತೆ ಕೆಲವರು 10 ವರ್ಷಗಳಿಂದಲೂ ಇರುವವರು ಇದ್ದಾರೆ. ಎಲ್ಲಾ ಒಟ್ಟಾಗಿ ವರ್ಗ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಫೇಸ್ಡ್ ಪ್ರೊಗ್ರಾಂನಲ್ಲಿ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ.—ಫೇಸ್‌ಡ್ ಪ್ರೊಗ್ರಾಂನಲ್ಲಿ ವರ್ಗಾವಣೆ ಮಾಡುವುದನ್ನು ಜಾರಿಗೆ ತರುತ್ತೇವೆ ಎಂದು ಹೇಳುತ್ತೀರ. ಆದರೆ ಆ 6 ಮಹಾ ವ್ಯಕ್ತಿಗಳನ್ನು ಆಲ್ಲಯೇ ಇರುವುದಕ್ಕೆ ಏನಾದರೂ ಪ್ರಬಲವಾದ ಇನ್‌ಫ್ಲುಯೆನ್ಸ್ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಇನ್‌ಫ್ಲುಯನ್ಸ್ ಬಂದಿಲ್ಲ. ಅವರನ್ನು ರಿಜೆನ್‌ಷನ್ ಮಾಡುವುದಕ್ಕೆ ಕಾರಣಗಳು ಇವೆ. ರಿಟೈರ್‌ಮೆಂಟ್ ಆಗತಕ್ಕ ಕಾರಣ, ಗಂಡ ಹೆಂಡತಿ ಒಂದೇ ಕಡೆ ಇಲ್ಲದೇ ಇರುವುದಕ್ಕೆ ಕಾರಣ, ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಕಾರಣ, ಕಾಯಿಲೆ ಕಸಾಲೆ ಇರುವ ಕಾರಣಗಳಿಂದ ಬಹುಶಃ ಅವರುಗಳು ಇದರಲ್ಲಿ ಬರುತ್ತಾರೆ ಎಂದು ಕಾಣುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಇದೇ ನೀತಿಯನ್ನು ಎಲ್ಲಾ ಕಡೆ ಅನ್ವಯಿಸುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಎ.ಆರ್. ಬದರೀನಾರಾಯಣ —ಸರಕಾರದ ನೀತಿ ತಮ್ಮಗಳ ಎಲ್ಲರ ಸಹಕಾರ ಇದ್ದರೆ ಬಹಳ ಯಶಸ್ವಿಯಾಗಿ ನಡೆಯುತ್ತದೆ.

Junior College at Raichur

470. Sri D. B. KALMANKAR (Afzalpur).—

Will the Minister for Education be pleased to state .—

(*a*) whether eleventh class was sanctioned to the Government Multipurpose High School, Raichur ;

(*b*) if so, when it was closed and reasons for such closure ;

(*c*) whether there is a demand from the public of Raichur to sanction a Junior College having at least Science subjects ;

(*d*) if so, why the Government has not accorded sanction so far ;

(*e*) whether there is a proposal before Government to sanction such college forthwith ?

Sri A. R. BADARINARAYANA (Minister for Education).—

(*a*) Under the Multipurpose Scheme of the former Hyderabad State, it had Standard XI.

(*b*) On introduction of the new Mysore S.S.L.C. Scheme in 1962-63, it was closed.

(*c*) Yes.

(*d*) Government have already accorded permission to upgrade the High School and to start I Year Pre-University Course from 1972-73.

(*e*) *Vide* reply to item (*d*).

Sri D. B. KALMANKAR.—Will the Government consider to have Junior Colleges in Gulbarga District for High Schools for which Junior Colleges were not sanctioned last year ?

† Sri A. R. BADARINARAYANA.—The request is there. Yesterday the Hon'ble Chief Minister made a statement here that the Government of India is not in favour of expanding the College activities hereafter and that we have to concentrate more on primary education. So, the question of expanding College education perhaps cannot go on at the rate at which it went on last year ; it has got to be limited to a particular number, that too wherever it is absolutely necessary. Gulbarga district will certainly be considered whenever there is absolute necessity.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಪ್ರತಿಯೊಬ್ಬ ವಿದ್ಯಾ ಮಂತ್ರಿಗಳು ಬಂದಾಗಲೂ ಕೂಡ ಶಿಕ್ಷಣದಲ್ಲಿ ಬದಲಾವಣೆ ಮಾಡುತ್ತಾ ಇರುವುದರಿಂದ ಒದ್ದಕ್ಕೆ ವಿದ್ಯಾರ್ಥಿಗಳಿಗಾಗಲೀ, ತಂದೆ ತಾಯಿಗಳಿಗಾಗಲೀ ಇದರಿಂದ ಆಗತಕ್ಕ ಕಷ್ಟವನ್ನು ಮನಗಂಡು ಯೂನಿಫಾರ್ಮಿಟಿ ತರಲಿಕ್ಕೆ ಹಿಂದೆ ಇದ್ದ ನಿಯಮಗಳನ್ನು ಮತ್ತೆ ತರಲು ಪ್ರಯತ್ನ ಮಾಡುತ್ತೀರಾ ? ಎಂಬ್ಲಾ ನಿಯಮಗಳನ್ನೂ ತೆಗೆದು ಹಾಕಿ ಒಂದೇ ನಿಗದಿಯಾದ ಎಕ್ಸಾಮಿನೇಷನ್ ಕಂಡಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಹೊಸ ಮಂತ್ರಿಮಂಡಲ ಬಂದಹಾಗೆಲ್ಲಾ ಸರಕಾರ ಅವುಗಳ ನೀತಿಯನ್ನು ಬದಲಾವಣೆ ಮಾಡುವಂಥದ್ದು ಆಗಬಾರದು ಎಂದು ತಿಳಿಸಿದ್ದೇವೆ. ಅದಕ್ಕೆ ಮೈಸೂರು ಎಜುಕೇಷನ್ ಆಕ್ಟ್ ಮಾಡಬೇಕು, ಅದಕ್ಕೆ ಒಂದು ಕಮಿಟಿಯನ್ನು ನೇಮಿಸಿ ಆ ದಿಶೆಯಲ್ಲಿ ಸರಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಕೆ. ಬಿ. ಶಿವಯ್ಯ.—ಸುಧಾರಣೆಗಳನ್ನು ಮಾಡುವಾಗ ಪರೀಕ್ಷೆಗಳನ್ನು ತೆಗೆದುಹಾಕುವ ವಿಚಾರ ಸರಕಾರಕ್ಕೆ ಇದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಆ ಐಡಿಯಾ ಇದೆ, ಇದು ಆರ್ ಇಂಡಿಯಾ ಪ್ಯಾಟ್ರನ್. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಅಬಾಲಿಷ್ ಮಾಡುವುದು ಅವಶ್ಯಕವೇ ಅಥವಾ ಅನಾವಶ್ಯಕವೇ ಎಂಬ ಪ್ರಶ್ನೆ ಇದೆ. ಅದನ್ನು ಕೂಡ ಸರಕಾರ ಕನ್ಸಿಡರ್ ಮಾಡುತ್ತದೆ.

ಶ್ರೀ ಎಸ್. ವಿ. ನಾಯಕ್.—ಡೂಪ್ಲಿಕೇಷನ್ ಆಫ್ ವರ್ಕ್ ಆಗಿರುವುದರಿಂದ ಪಿ.ಯು.ಸಿ. ಬೋರ್ಡ್ ಮುಚ್ಚುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಅದನ್ನು ಯಾಕೆ ಮುಚ್ಚಬೇಕೋ ಗೊತ್ತಾಗುವುದಿಲ್ಲ. This Board is a very important authority which guides the Pre-university ed cation.

ಶ್ರೀ ಎಂ. ವಿರೂಪಾಕ್ಷಪ್ಪ ಶಿವಪ್ಪ.—ಹೈಸ್ಕೂಲುಗಳು ಏರಿಯಾದಲ್ಲಿರುವ ಹೈಸ್ಕೂಲುಗಳು ಹಾಗೂ ಪ್ರೈವೇಟು ಕಾಲೇಜುಗಳಿಗೆ ಬದಲಾಗಿ ಜೂನಿಯರ್ ಕಾಲೇಜುಗಳೆಂದು ಮಾಡಿ ಹೆಚ್ಚು ಫೀಸುಗಳನ್ನು ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು, ಇಲ್ಲಿರುವ ಹೈಸ್ಕೂಲುಗಳನ್ನು ಬದಲಾವಣೆ ಮಾಡುವಾಗ ಜೂನಿಯರು ಕಾಲೇಜುಗಳಾಗಿ ಮಾಡಲು ಸರಕಾರ ಅವಕಾಶ ಕೊಡುತ್ತದೆಯೇ ?

Sri A. R. BADARINARAYANA.—The suggestion of the hon. member will be considered.

ಶ್ರೀ ಕೋಣಂದೂರು ಲಿಂಗಪ್ಪ.—ಈಗಿರತಕ್ಕ ಜೂನಿಯರ್ ಕಾಲೇಜುಗಳನ್ನು ತೆಗೆಯುವುದಿಲ್ಲ ಎಂದು ಇಲ್ಲಿ ಆಶ್ವಾಸನೆ ಕೊಡುತ್ತಾರೆಯೇ ? ಮತ್ತು ಈಗಿರತಕ್ಕ ಪಿ.ಯು.ಸಿ ಬೋರ್ಡ್ ಚೆನ್ನಾಗಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಸರಕಾರ ಒಪ್ಪುತ್ತದೆಯೇ ?

ಶ್ರೀ ಎ. ಆರ್ ಬದರಿನಾರಾಯಣ.—ಜೂನಿಯರ್ ಕಾಲೇಜುಗಳಿರಬೇಕೆಂಬುದೇ ಸರಕಾರದ ನೀತಿಯಾಗಿದೆ, ಮಿನಿಮಂ ಆಗಿ ಒಂದೊಂದು ತಾಲ್ಲೂಕಿನಲ್ಲೂ ಒಂದು ಜೂನಿಯರು ಕಾಲೇಜು ಇರಬೇಕು. ಪಿ.ಯು.ಸಿ. ಬೋರ್ಡ್ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದ್ದು ನನಗೂ ಸಂತೋಷವಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಎಸ್.ಎಸ್.ಎಲ್.ಸಿ. ಪರೀಕ್ಷೆ ರದ್ದು ಮಾಡಬೇಕೆನ್ನುವ ಸೂಚನೆ ಇದೆ ಎಂದು ಹೇಳುವುದು ಸರಿಯಲ್ಲ. ಈಗಾಗಲೇ 8ನೇ ತರಗತಿವರೆಗೆ ಪರೀಕ್ಷೆಗಳನ್ನು ರದ್ದು ಮಾಡಿದಾಗ ಅನೇಕ ಅನಾಹುತಗಳಾಗಿ ಮತ್ತೆ ಇದನ್ನು ಬದಲಾವಣೆ ಮಾಡಿ ಪರೀಕ್ಷೆಗಳನ್ನು ಮಾಡುತ್ತಿದ್ದಾರೆ. ಆದುದರಿಂದ ಇನ್ನು ಮುಂದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ರದ್ದು ಮಾಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ಸರಕಾರ ಈ ಸಭೆಗೆ ಕೊಡುತ್ತದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಇಂತಹ ಒಂದು ಐಡಿಯಾ ಇದೆ ಎಂದು ಮಾತ್ರ ಹೇಳಿರುವುದು. ಇದನ್ನು ರದ್ದು ಮಾಡಬೇಕೆಂದು ಹೇಳಲಿಲ್ಲ. ಇತರ ಎಲ್ಲ ವಿಚಾರಗಳೂ ಬಂದಿರುವ ಹಾಗೆ ಇದೂ ಬಂದಿರುವುದರಿಂದ ಇವನ್ನೆರಾ ಆವರು ಗಮನಿಸುತ್ತಾರೆಂದು ಹೇಳಿರುವುದು.

MADAM SPEAKER.—Now Questions are over.

Questions for Answers on the Day

(but not taken up)

Government High School, Kolar

175. Sri C. BYRE GOWDA (Vemgal).—

Will the Minister for Education be pleased to state :—

(*a*) the number of Boys and Girls students in Government High School, Kolar ; whether the accommodation in this school is in accordance with the strength of students ;

(*b*) if not, whether the Government would take immediate steps to provide sufficient accommodation.

(*c*) whether it has come to the notice of the Government that both the Boys and Girls High Schools is having only one Head Master and are under the control of one management ;

(*d*) if so, whether another Head Master would be appointed immediately to rectify the administration ?